**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **48/2021**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **01**

ಸಿ.ಡಬ್ಲ್ಯೂ ನಂಃ **01**

ಸಾಕ್ಷಿಯನ್ನು ದಿನಾಂಕಃ **09-01-2023**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಬಸವಂತಪ್ಪ
ತಂದೆಯ ಹೆಸರು ಃ ಗವಿಸಿದ್ದಪ್ಪ
ವಯಸ್ಸು ಃ 21 ವರ್ಷ
ಉದ್ಯೋಗ ಃ ವಿದ್ಯಾರ್ಥಿ
ವಾಸ ಸ್ಥಳ ಃ ಚೌಡಾಪುರ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಾವು ನಮ್ಮ ತಂದೆ-ತಾಯಿಗೆ 3 ಜನ ಮಕ್ಕಳು. ಮೃತ ಸುಮಿತ್ರಾ ನನ್ನ ಅಕ್ಕ. ಆರೋಪಿ ನಮ್ಮ ಅಕ್ಕನ ಗಂಡ. ಅವರ ಮದುವೆ 10 ವರ್ಷಗಳ ಹಿಂದೆ ಆಗಿತ್ತು, ಅವರಿಗೆ ಇಬ್ಬರು ಮಕ್ಕಳಿದ್ದಾರೆ. 7 ವರ್ಷಗಳ ಕಾಲ ಅವರು ಚೆನ್ನಾಗಿದ್ದರು. 7 ವರ್ಷಗಳಾದ ನಂತರ ಆರೋಪಿ ನಮ್ಮ ಅಕ್ಕನಿಗೆ ನಿನ್ನ ಗುಣ ನಡತೆ ಚೆನ್ನಾಗಿಲ್ಲ ಎಂದು ಶೀಲದ ಬಗ್ಗೆ ಸಂಶಯ ಪಡುತ್ತಾ ನೀನು ಸತ್ತು ಹೋದರೆ ಚೆನ್ನಾಗಿರುತ್ತದೆ ನಾನು ಇನ್ನೊಂದು ಮದುವೆ ಮಾಡಿಕೊಳ್ಳುತ್ತೇನೆ ಎಂದು ಮಾನಸಿಕ ದೈಹಿಕ ಕಿರುಕುಳ ಕೊಡುತ್ತಿದ್ದನು, ನಮ್ಮ ಅಕ್ಕ ಮನೆಗೆ ಬಂದಾಗ ಈ ಎಲ್ಲಾ ವಿಷಯಗಳನ್ನು ಹೇಳುತ್ತಿದ್ದಳು, ಆಗ ನಾವೆಲ್ಲರೂ ಸೇರಿಕೊಂಡು ಆಕೆಗೆ ಧೈರ್ಯ ಹೇಳಿ ಸಮಾಧಾನಪಡಿಸಿ ವಾಪಸ್ ಕಳುಹಿಸುತ್ತಿದ್ದೆವು, ಆರೋಪಿಯನ್ನು ಕರೆಸಿ ನಮ್ಮ ತಂದೆ-ತಾಯಿಯರು ಹಾಗೂ ಗುರುಹಿರಿಯರು ಬುದ್ದಿವಾದ ಹೇಳಿ ಕಳಿಸಿದ್ದರು. ದಿಃ 26-4-2021 ರಂದು ನಮ್ಮ ತಾಯಿಗೆ ಎಸ್ ಎಸ್ ಕಟ್ಟಿಮನಿ ಖಾಸಗಿ ಆಸ್ಪತ್ರೆ ಹಿರೇವಂಕಲಕುಂಟಾದಲ್ಲಿ ಆಪರೇಶನ ಆಗಿದ್ದು ಆಗ ನಮ್ಮ ಅಕ್ಕ ನಮ್ಮ ತಾಯಿಯನ್ನು ಮಾತನಾಡಿಸಲು ಹೋಗಿದ್ದಳು. 03 ದಿನಗಳ ನಂತರ ದಿಃ 28-4-2021 ರಂದು ಮದ್ಯಾಹ್ನ 12 ಗಂಟೆಗೆ ಚೌಡಾಪುರ ಗ್ರಾಮಕ್ಕೆ ಕರೆದುಕೊಂಡು ಹೋಗಿ 12 ಗಂಡನ ಯಡ್ಡೋಣಿ ಗ್ರಾಮಕ್ಕೆ ಬಿಟ್ಟು ಬಂದೆವು. ನಾನು ನನ್ನ ತಮ್ಮ, ನನ್ನ ತಾಯಿಯ ಜೊತೆ ಆಸ್ಪತ್ರೆಯಲ್ಲಿದ್ದೆವು.

ತದನಂತರ ನಮ್ಮ ಊರಿನ ರಮೇಶ, ವಿರಣ ಕುಂಟೋಜಿಯವರು ಸಂಜೆ 5-30 ಗಂಟೆಗೆ ಫೋನು ಮಾಡಿ ನಿಮ್ಮ ಅಕ್ಕಳಾದ ಸುಮಿತ್ರಾ ಮತ್ತು ಮಗ ರಾಜೇಂದ್ರಪ್ರಸಾದ

ಇವರು ವಿಷ ಸೇವಿಸಿದ್ದು, ಕುಷ್ಟಗಿ ಆಸ್ಪತ್ರೆಗೆ ಅವರನ್ನು ಕರೆದುಕೊಂಡು ಹೋಗಿದ್ದಾರೆಂದು ಹೇಳಿದ್ದರು. ನನ್ನ ತಮ್ಮ ದೇವರಾಜ ಕುಷ್ಟಗಿ ಆಸ್ಪತ್ರೆಗೆ ಗಾಡಿ ತೆಗೆದುಕೊಂಡು ಹೋದ, ನಾನು ನಮ್ಮ ತಾಯಿಯ ಜೊತೆ ಇದ್ದೆ. ನಮ್ಮ ತಮ್ಮ ರಾತ್ರಿ 11-15 ಗಂಟೆಗೆ ನನಗೆ ಫೋನು ಮಾಡಿ ಅಕ್ಕ ಮತ್ತು ಆಕೆಯ ಮಗ ಚಿಕಿತ್ಸೆ ಫಲಕಾರಿಯಾಗದೇ ಪ್ರಜ್ಞಾಹೀನರಾಗಿದ್ದಾರೆಂದು ಹೇಳಿದ, ನಾನು ಆಸ್ಪತ್ರೆಗೆ ಹೋಗಿ ನೋಡಿ ಅಲ್ಲಿದ್ದ ಅಮರೇಶಪ್ಪ ಅವರನ್ನು ವಿಚಾರಿಸಿದಾಗ ಅವರು ಯಡ್ಡೋಣಿ ಸೀಮಾದ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಸಂಜೆ 4-30 ಗಂಟೆಗೆ ನಮ್ಮ ಅಕ್ಕ ಪಕ್ಕದ ಹೊಲದಲ್ಲಿ ಕೆಲಸ ಮಾಡುತ್ತಿದ್ದು ಅವರ ತಮ್ಮನ ಹೆಂಡತಿಯಾದ ರೇಣುಕಮ್ಮ ಗಂಡ ಮಂಜುನಾಥ ರೊಟ್ಟಿ ಬಂದು ಅಕ್ಕ ಸುಮಿತ್ರಾ ಮತ್ತು ರಾಜೇಂದ್ರಪ್ರಸಾದ ವಿಷ ಕುಡಿದು ಹೊಲದಲ್ಲಿ ಹೊರಳಾಡುತ್ತಿದ್ದಾರೆಂದು ಹೇಳಿದ್ದು ಅವರು ಖಾಸಗಿ ವಾಹನದಲ್ಲಿ ಕುಷ್ಟಗಿ ಆಸ್ಪತ್ರೆಗೆ ಕರೆದುಕೊಂಡು ದಾಖಲು ಮಾಡಿದ್ದಾಗಿ ಹೇಳಿದರು.

ನಂತರ ಕುಷ್ಟಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಸರಿಯಾಗದೇ ಕೊಪ್ಪಳದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ಹೇಳಿದ್ದು ನಾವು ಕರೆದು ತಂದು ದಾಖಲು ಮಾಡಿದ್ದು, ನಂತರ ರಾತ್ರಿ 10-30 ಗಂಟೆಗೆ ನಮ್ಮ ಅಕ್ಕ ಚಿಕಿತ್ಸೆ ಫಲಕಾರಿಯಾಗದೇ ತೀರಿಕೊಂಡಳು. ರಾತ್ರಿ 11 ಗಂಟೆಗೆ ಆಕೆಯ ಮಗ ರಾಜೇಂದ್ರಪ್ರಸಾದ ಸಹಾ ಚಿಕಿತ್ಸೆ ಫಲಕಾರಿಯಾಗದೇ ತೀರಿಕೊಂಡ. ಈ ಎಲ್ಲಾ ವಿಷಯ ತಿಳಿದುಕೊಂಡ ನಂತರ ಬೇವೂರು ಪೊಲೀಸ ಠಾಣೆಗೆ ದಿಃ 29-4-2021 ರಂದು ಬೆಳಿಗ್ಗೆ 11 ರಿಂದ 12 ಗಂಟೆಯೊಳಗೆ ದೂರನ್ನು ಕೊಟ್ಟೆವು. ಸದರಿ ದೂರನ್ನು ನಿಪಿ 1 ಎಂದು, ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ</u>

ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ